# ಯಾರೂ ಸಂಗಡ ಬಾಹೋರಿಲ್ಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 485
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 271
3. Note: Lyrics given here are as per Ref. 2. Lyrics given in Ref. 2 are slightly different and are not considered here.
4. **Note:** Singer has followed these lyrics (as in Ref. 1).

ರಾಗ: ರೇಗುಪ್ತಿ ತಾಳ: ಝುಂಪೆ

ಯಾರೂ ಸಂಗಡ ಬಾಹೋರಿಲ್ಲ
ನಾರಾಯಣ ನಾಮ ನೆರೆ ಬಾಹೋದಲ್ಲದೆ ॥ ಪ ॥

ಹೊತ್ತು ನವಮಾಸ ಪರಿಯಂತರವು ಗರ್ಭದಲಿ
ಹೆತ್ತು ಬಲು ನೋವು ಬೇನೆಗಳಿಂದಲಿ
ತುತ್ತು ಬುತ್ತಿಯ ಕೊಟ್ಟು ಸಲಹಿದಂಥ ತಾಯಿ
ಅತ್ತು ಕಳುಹುವಳಲ್ಲದೆ ನೆರೆಬಾಹಳೆ ॥ 1 ॥

ದೇವ ವಿಪ್ರರು ಅಗ್ನಿ ಸಾಕ್ಷಿಯಿಂದಲಿ ತನ್ನ
ಭಾವ ಶುದ್ಧದಿ ಧಾರೆಯೆರಿಸಿಕೊಂಡ
ದೇವಿ ತನ್ನತಿ ತಲೆಗೆ ಕೈಯಿಟ್ಟುಕೊಂಡು ಇ-
ನ್ನಾವ ಗತಿಯೋ ಎಂದು ಅಳುತುಳಿವಳಲ್ಲದೆ ॥ 2 ॥

ಮತ್ತೆ ಪ್ರಾಣನು ತನುವ ಬಿಟ್ಟು ಹೋಗುವಾಗ
ಎತ್ತಿವನ ಹೊರಗೊಯ್ದು ಹಾಕೆಂಬರು
ಎತ್ತಿದಾ ಕಸಕಿಂತ ಕಡೆಯಾಯಿತೀ ದೇಹ
ವಿತ್ತವೆಷ್ಟಿದ್ದರೂ ಫಲವಿಲ್ಲ ಪ್ರಾಣಿ ॥ 3 ॥

ಪುತ್ರ ಮಿತ್ರರು ಸಕಲ ಬಂಧುಗಳು ಸತಿಯರು
ಹತ್ತಿರದೊಳ್ ನಿಂತು ನೋಡುವರಲ್ಲದೆ
ಮೃತ್ಯುದೇವಿಯು ಬಂದು ಪ್ರಾಣವನು ಸೆಳೆದಾಗ
ಜಾತ್ರೆ ಜನರಷ್ಟಿದ್ದು ಏನು ಮಾಡುವರು ॥ 4 ॥

ಯಮನ ದೂತರು ಬಂದು ಪಾಶವನು ತಗಲ್ಹಾಕಿ
ಮಮತೆಯಿಲ್ಲದೆ ಪ್ರಾಣ ಎಳೆಯುತಿರಲು
ವಿಮುಖನಾಗಿ ತಾನು ವ್ಯಥೆಯಿಂದ ಪೋಪಾಗ
ಕಮಲಾಕ್ಷ ಪುರಂದರ ವಿಠಲ ನೀನಲ್ಲದೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಯಾರೂ ಸಂಗಡ ಬಾಹೋರಿಲ್ಲ** – ಸಾಯುವಾಗ, ಪ್ರಾಣವು ಹೊರಗೆ ಹೋಗುವಾಗ ಜೊತೆಗೆ ಬರುವವರು ಯಾರೂ ಇರರು. ಜೀವ ಒಂಟಿಯಾಗಿಯೇ ಸಾಗಬೇಕೆಂಬುದನ್ನು ಧ್ವನಿಸುವ ಮಾತು.

**ನವಮಾಸ ಪರಿಯಂತರ** – ಒಂಬತ್ತು ತಿಂಗಳವರೆಗೆ.

**ಬಾಹಳೆ** – ಬರುವಳೆ.

**ವಿತ್ತ** = ಧನ, ರೊಕ್ಕ

**Classification:** Keerthane
**Ankita:** purandara vittala
**Location:** NA
**Category:** Vidhi Chintane, Virakti
**Sub-Category:** Narayana, butti, tayi, deva, brahmana, agni, maduve, patni, devi, kai, prana, deha, rokka, prani, maga, mitra, jana, yama,
**Pravachana:** NA
**Explanation:** NA